ಇಸ್ತಿಹಾರ್ನಾಮಾ, ತಾರೀಖು 12ನೆ ಫೆಬ್ರುವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾಡ್ರ್.	11—3—09	ಸಾಗ್ವಾನಿ ನಾಟಾ ...	800	25,000	ಕೆಚ್ಚು ಕಡಿಸು.
			ಡಿಟೋ ಜಂತಿಗಳು ...	400	5,000	
			ಹೊನ್ನೆ ನಾಟಾ ...	150	4,000	
			ಡಿಟೋ ಜಂತಿಗಳು ...	20	1,000	
			ಮತ್ತಿ ನಾಟಾ	200	5,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ಡಿಪೋ	12—3—09	ಸಾಗುವಾನಿ ನಾಟಾ ...	100	3,000	
			ಡಿಟೋ ಜಂತಿಗಳು ...	100	1,000	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	100	500	
			ಮತ್ತಿ ನಾಟಾ ...	100	1,500	
			ಡಿಟೋ ಜಂತಿಗಳು	10	120	
			ಬೀಟೆ ನಾಟಾ	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಆದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ಕಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜೆ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 30ನೆ ಜನವರಿ 1909, ಬೆಂಗಳೂರು.

ಚನ್ನಪಟ್ಟಣದಲ್ಲಿರುವ 2ನೆ ಕ್ಲಾಸ್ ಮುನಸಾಫರ್ ಬಂಗ್ಲೆಗೆ ರಿಪೇರಿ ಮಾಡಬೇಕಾಗಿರುವದ್ದರಿಂದ ಅದರಲ್ಲಿ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು ಮಾರ್ಚಿ ಆಖೈರ ವರಿಗೆ ಯಾರೊಬ್ಬ ಪ್ರಯಾಣೀಕರು ಇಳಿಯುವದಕ್ಕೆ ಅವಕಾಶ ವಿರುವದಿಲ್ಲಾ.

ಇಸ್ತಿಹಾರ್.

ಸರ್ಕಾರಕ್ಕೆ ಬರಬೇಕಾದ ಲೋನ್ ಬಾಕಿಗಾಗಿ ಬೆಂಗಳೂರು ತಾಲ್ಲೂಕು ಯಲಹಂಕದ ಹೋಬಳಿ ಜೋಡಿ ಗೊಲ್ಲಹಳ್ಳಿ ಗ್ರಾಮವು 1909ನೆ ಇಸವಿ ಮಾರ್ಚಿ 3ನೆ ತಾರೀಖು ದಿನ ಬಹಿರಂಗವಾಗಿ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಹೆಚ್ಚು ತಪಶೀಲಿಗೆ 1909ನೆ ಇಸವಿ ಫೆಬ್ರುವರಿ 4ನೆ ಶುಕ್ರುವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 64—65ನೆ ಪುಟದಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.